ಸಂಶಯ ಹೆಚ್ಚಿಸಿತ್ತು. ಜನರ ಆಕ್ರೋಶ ತಣಿಸಲು ಆತಂಕ ನಿವಾರಿಸಲು ಮತ್ತು ಹರಿದ್ವಾರದಲ್ಲಿ ಕೂಡ ಸಹಾಯವಾಣಿ ಕೇಂದ್ರ ತೆರೆಯಲು ನಿಶ್ಚಯಿಸಿ ಹೆಚ್ಚಿನ ಅಧಿಕಾರಿಗಳನ್ನು ನಿಯೋಜಿಸಬೇಕೆಂಬ ನಮ್ಮ ಮನವಿಗೆ ಸರ್ಕಾರ ಒಪ್ಪಿತು. ಎರಡೇ ದಿನದಲ್ಲಿ ನಮ್ಮೊಡನೆ ವರಪ್ರಸಾದ ರೆಡ್ಡಿ, ನಾಗರಾಜ್ ಮತ್ತು ನಟೇಶ್ ಸೇರಿಕೊಂಡರು. ಇವರ ಜೊತೆಗೆ ಸರ್ಕಾರ ವೈದ್ಯರ ತಂಡವನ್ನೂ ಕಳುಹಿಸಿಕೊಟ್ಟಿತ್ತು.

ಯಾತ್ರಾರ್ಥಿಗಳಿಗೆ ಊಟದ ವ್ಯವಸ್ಥೆ ಮತ್ತು ಸಾರಿಗೆ ವ್ಯವಸ್ಥೆ ಮಾಡಲು ಹಣದ ಅವಶ್ಯಕತೆ ಇತ್ತು. ಅಂದಿನ ಕಂದಾಯ ಇಲಾಖೆಯ ಕಾರ್ಯದರ್ಶಿ ತುಷಾರ್ ಗಿರಿನಾಥ್‌ರವರು 5 ಲಕ್ಷ ರೂಪಾಯಿ ಹಣ ಬಿಡುಗಡೆ ಮಾಡಿ ಆದೇಶ ಹೊರಡಿಸಿದರು. ಹೃಷಿಕೇಶದ ಬ್ಯಾಂಕೊಂದರಲ್ಲಿ ಅಕೌಂಟ್ ಓಪನ್ ಮಾಡಿ ಹಣ ಡ್ರಾ ಮಾಡಿಕೊಂಡೆವು. ಸಾಧ್ಯ ಇರುವ ಕೆಲವರು ತಮ್ಮ ಸಂಬಂಧಿಕರ, ಸ್ನೇಹಿತರ ಮತ್ತು ಮಾಧ್ಯಮಗಳಿಂದ ಮೊಬೈಲ್ ನಂಬರ್ ಪಡೆದು ನಮ್ಮನ್ನು ಸಂಪರ್ಕಿಸಿದರು. ಅವರನ್ನೆಲ್ಲಾ ಸುರಕ್ಷಿತವಾಗಿ ರಕ್ಷಿಸಿ ಕರೆತಂದು ಊಟ ಮತ್ತು ವೈದ್ಯಕೀಯ ಉಪಚಾರ ಒದಗಿಸಿದೆವು. ಸಾಧ್ಯವಾದಷ್ಟೂ ಕನ್ನಡಿಗರನ್ನು ರಕ್ಷಿಸಬೇಕು. ಅವರನ್ನು ಸುರಕ್ಷಿತವಾಗಿ ಕನ್ನಡ ನೆಲಕ್ಕೆ ಮುಟ್ಟಿಸಬೇಕು ಎನ್ನುವುದೊಂದೇ ಧಾವಂತದಿಂದ ಕೆಲಸ ಮಾಡುತ್ತಿದ್ದೆವು. ನಮ್ಮ ಜೊತೆಗೆ ನೆರವಾಗುತ್ತಿದ್ದವರಿಗೆ ಅಲ್ಲಿ ಜಾತಿ, ಧರ್ಮ, ದೇಶ, ಗಡಿ ಯಾವುದರ ಹಂಗೂ ಇರಲಿಲ್ಲ. ಸಾವಿನ ಕನ್ನಡಿಯಲ್ಲಿ ಎಲ್ಲರೂ ತಮ್ಮ ತಮ್ಮ ಮುಖ ನೋಡಿಕೊಂಡವರಂತೆ ಜೀವ ಉಳಿಸುವುದಷ್ಟಕ್ಕೇ ತಾವು ಬದುಕಿದ್ದೇವೆ ಎಂಬಂತೆ ಕೆಲಸ ಮಾಡುತ್ತಿದ್ದರು.

ಈ ನಡುವೆಯೂ ಸಾವಿನ ಕನ್ನಡಿಯಲ್ಲಿ ಕಂಡ ಕೆಲವು ಮುಖಗಳು, ಹಲವು ಸಭ್ಯ ಮುಖಗಳ ಮುಖವಾಡಗಳು ನನ್ನನ್ನು ಚಕಿತಗೊಳಿಸಿದ್ದವು. ನನ್ನದೇ ಅನುಭವ ನಟೇಶ್‌ಗೂ ಆಗಿತ್ತು. ಒಬ್ಬ ಸನ್ಯಾಸಿ ಸ್ವಾಮೀಜಿ ಅವರ ಉದ್ಯಮಿ ಸ್ನೇಹಿತರೊಬ್ಬರ ಜೊತೆಗೆ ನಮ್ಮನ್ನು ಹುಡುಕಿಕೊಂಡು ಬಂದು, 'ಜೋಗಿ ಮಠದಿಂದ ಹೃಷಿಕೇಶಕ್ಕೆ ಬಾಡಿಗೆ ಕಾರಿನಲ್ಲಿ ಬಂದಿದ್ದೇವೆ' ಎನ್ನುತ್ತಾ ಆ ಬಾಡಿಗೆ ಹಣದ ಜೊತೆಗೆ ಕರ್ನಾಟಕಕ್ಕೆ ಹಿಂತಿರುಗಲು ತಗುಲುವ ಪ್ರಯಾಣ ವೆಚ್ಚವನ್ನೂ ನಮ್ಮಿಂದ ಬಹಳ ಅಧಿಕಾರಯುತವಾಗಿ ಪಡೆದುಕೊಂಡರು. ಮಂಡ್ಯದ ಪಕ್ಕದ ಹಳ್ಳಿಯಿಂದ ಚಾರ್‌ಧಾಮ್ ಯಾತ್ರೆಗೆ ಬಂದಿದ್ದ 25 ಯಾತ್ರಾರ್ಥಿಗಳ ತಂಡ ಆಶ್ರಮವೊಂದರಲ್ಲಿ ತಂಗಿರುವ ಮಾಹಿತಿ ತಿಳಿಯಿತು. ಸಹಾಯವಾಣಿ ಕೇಂದ್ರವನ್ನು ಡಾಕ್ಟರ್ ಚೆನ್ನಕೇಶವ್ ಅವರಿಗೆ ನೋಡಿಕೊಳ್ಳುವಂತೆ ಹೇಳಿ ನಾನು ಮತ್ತು ನಟೇಶ್ ಆಶ್ರಮ ತಲುಪಿದೆವು. ಮುಕ್ಕಾಲು ಪಾಲು ಹೆಂಗಸರೇ. ಎಲ್ಲರೂ ನೀಳಕಾಯದವರು. ಆತಂಕವಿಲ್ಲದ ಮುಖಚಹರೆ. ಆದರೆ, ಭಗವಂತನ ದರ್ಶನ ಭಾಗ್ಯ ಸಿಗಲಿಲ್ಲವೆಂಬ ಒಂದೇ ಯಾತನೆ ಅವರದ್ದು. ಕನ್ನಡದಲ್ಲಿ ಮಾತನಾಡಲಾರಂಭಿಸಿದರು. ಅವರ ಸಮಾಧಾನ ನಮ್ಮ ಮುಖದಲ್ಲಿದ್ದ ಆತಂಕವನ್ನು ಅಳಿಸಿತು. ನಿರಾಸೆಯಲ್ಲೂ ಮುಖ ಅರಳಿತು. ನಾವಿಬ್ಬರೂ ಅವರು ಆತಂಕಗೊಂಡಿದ್ದಾರೆ ಎಂದು ಭಾವಿಸಿ, ವೈದ್ಯಕೀಯ ಪರೀಕ್ಷೆ ಮಾಡಿಸುವುದಾಗಿಯೂ, ರಾಜ್ಯಕ್ಕೆ ಮರಳಲು ಎಲ್ಲ ವ್ಯವಸ್ಥೆ ಮಾಡುವುದಾಗಿಯೂ ತಿಳಿಸಿದೆವು. ಅವರು ತಾವೆಲ್ಲಾ ಆರೋಗ್ಯದಿಂದ ಇರುವುದಾಗಿ ತಿಳಿಸಿ ಧನ್ಯವಾದ ಅರ್ಪಿಸಿ, ನಮ್ಮ ನೆರವನ್ನು ನಿರಾಕರಿಸಿದ್ದು ಮಾತ್ರವಲ್ಲ, 'ನೆರವಿನ ಅಗತ್ಯ ಇರುವವರು ಬಹಳ ಮಂದಿ ಇರ್ತಾರೆ. ಅವರಿಗೆ ನೆರವಾಗಿ' ಎಂದು ಕೋರಿಕೊಂಡರು. ಆ ಗುಂಪಿನಲ್ಲಿದ್ದ 70ರ ಆಸುಪಾಸಿನಲ್ಲಿದ್ದ ಶಿವಪ್ಪರತ್ತ ದೃಷ್ಟಿ ಹಾಯಿಸಿದೆ. ಬಿಳಿ ಅಂಗಿ, ಅದಕ್ಕೊಪ್ಪುವ ಬಿಳಿ ಪಂಚೆ. ಹೆಗಲ ಮೇಲೆ ಟವಲ್. ಅವರ ಚರ್ಮದ ಬಣ್ಣ ಮಳೆ ಗಾಳಿ ಬಿಸಿಲಿಗೆ ಹದಗೊಂಡ ಭೂಮಿ ಬಣ್ಣಕ್ಕೆ ತಿರುಗಿದಂತಿತ್ತು. ಶ್ರಮದ ಬದುಕಿನ ಸಂಕೇತದಂತಿದ್ದ ಕಟ್ಟುಮಸ್ತಾದ ದೇಹ ನಾವಿಬ್ಬರು ಸರ್ಕಾರಿ ಅಧಿಕಾರಿಗಳ ಹೊಟ್ಟೆ ಉಬ್ಬಿರುವುದನ್ನು ಅಣಕಿಸುತ್ತಿತ್ತು.

'ನೋಡಿ ಯಜಮಾನ್ರೆ. ಸರ್ಕಾರ ಎಲ್ಲಾ ಯಾತ್ರಿಗಳಿಗೆ ವಾಪಸ್ ಹೋಗಲಿಕ್ಕೆ ವ್ಯವಸ್ಥೆ ಮಾಡ್ತಿದೆ. ನಿಮಗೆ ಕೂಡ ವ್ಯವಸ್ಥೆ ಮಾಡ್ತಿವಿ. ಯಾಕ್ ಬೇಡ ಅಂತೀರಾ. ಹಣ ಸರ್ಕಾರದ್ದು, ತಗೊಳ್ಳಿ' ಎಂದು ಮಾತು ಮುಗಿಸುವ ಮುನ್ನವೇ ಮುಂದೆ ಮಾತನಾಡಲು ಆಸ್ಪದ ಕೊಡದೆ,

'ನೋಡಿ ಸಾಹೇಬ್ರೆ, ಜೀವನದಲ್ಲಿ ಒಂದ್ ಸಾರಿಯಾದ್ರು ಚಾರ್‌ಧಾಮ್ ದರ್ಶನ ಮಾಡಬೇಕು; ಗಂಗೋತ್ರಿ, ಯಮುನೋತ್ರಿ, ಬದರೀನಾಥ ಮತ್ತು ಕೇದಾರನಾಥ ದರ್ಶನ ಮಾಡಿದರೆ ನಮ್ಮ ಪಾಪಕರ್ಮ